ಶ್ರೀ ಕೆ. ಎನ್. ವೀರಪ್ಪಗೌಡ.—ಗಾಂಧಿ ಶತಮಾನೋತ್ಸವದ ಇಂದಿನ ಸಂದರ್ಭದಲ್ಲಿ ಮನೆ ಕಟ್ಟಿಕೊಳ್ಳಲು ಹಿಂದುಳಿದವರು ಮನೆ ಸೈಟುಗಳನ್ನು ಕೇಳುತ್ತಿದ್ದರೂ ಅವರಿಗೆ ಇನ್ನು ಸೈಟುಗಳು ಮಂಜೂರಾಗಿಲ್ಲ. ಇದನ್ನು ಬೇಗನೆ ಮಂಜೂರು ಕೊಡುತ್ತೀರಾ ?

Sri H. V. KOUJALGI.—So far as house sites are concerned, where they have built the house, Government have issued a stay order not to evict them till the matter is finally considered.

ಶ್ರೀ ಬಿ. ದೊಡ್ಡಬೋರೇಗೌಡ.—ನಾನು ಒಂದು ಪ್ರಶ್ನೆ ಕೇಳಬೇಕಾಗಿದೆ. ಒಂದು ಕೆರೆಯ ವಿಚಾರವಾಗಿ ಹೇಳಬೇಕಾಗಿದೆ. ಅದು ಮಂತ್ರಿಗಳ ಗಮನಕ್ಕೂ ಬಂದಿಲ್ಲ, ತಮ್ಮ ಗಮನಕ್ಕೂ ಬಂದಿಲ್ಲ. ಆ ಕೆರೆಯಲ್ಲಿ 1200 ಎಕರೆ ತರಿ ಜಮೀನು ಆಗವುದು ಇದೆ. ಅದರ ಸಂಬಂಧವಾಗಿ ರೆವಿನ್ಯೂ ಮಂತ್ರಿಗಳಿಗೆ 6 ತಿಂಗಳಿನಿಂದ ಕಾಗದ ಬರೆದಿದ್ದೇನೆ ಮತ್ತು ಒಂದು ತಿಂಗಳ ಹಿಂದೆ ನೋಡಿದ್ದೇನೆ. ಇದುವರೆಗೂ ಏನೂ ಉತ್ತರ ಬಂದಿಲ್ಲ, ಸ್ವಾಮಿ.

ಅಧ್ಯಕ್ಷರು.—ಆ ಪ್ರಶ್ನೆ ನಂಬರು ಕೊಡಿ ನೋಡುತ್ತೇನೆ. Now questions 56 and 447 may the taken up together.

Writ Petition filed by Officials of the New Mysore State

56. Sri MAHADEV BANAKAR (Byadgi).—

Will the Minister for Law, Labour and Parliamentary Affairs be pleased to state :—

the number of writ petitions filed before the Mysore High Court by the officers and officials of the New Mysore State from January 1957 to January 1969 ?

Sri K. PUTTASWAMY (Minister for Law, Labour and Parliamentary Affairs).—

2,204.

Writ Petitions pending before the High Court

447. Sri R. G. WALI (Hubli).—

Will the Minister for Law, Labour and Parliamentary Affairs be pleased to state :—

(*a*) the number of Writ petitions pending before the High Court ;

(*b*) the number of cases in which stay orders have been issued ?

Sri K. PUTTASWAMY (Minister for Law, Labour and Parliamentary Affairs).—

(*a*) 3,590.

(*b*) 1,999.

ಶ್ರೀ ಮಹದೇವ್ ಜಿ. ಬಣಕಾರ್.—ಸ್ವಾಮಿ, 1957ನೇ ಇಸವಿ ಜನವರಿಯಿಂದ 1969ನೇ ಇಸವಿ ಜನವರಿಯವರೆಗೆ ಮೈಸೂರು ರಾಜ್ಯದ ಉಚ್ಚನ್ಯಾಯಾಲಯದ ಮುಂದೆ ಹೊಸ ಮೈಸೂರು ರಾಜ್ಯದ ಅಧಿಕಾರಿಗಳು ಮತ್ತು ನೌಕರರುಗಳು ದಾಖಲ್ಮಾಡಿರುವ ರಿಟ್ ಅರ್ಜಿಗಳ ಸಂಖ್ಯೆ ಎಷ್ಟೆಂಬುದಕ್ಕೆ 2204 ಎಂದು ಹೇಳಿದ್ದೀರಿ. ಹಾಗಾದರೆ ವರ್ಷ ಒಂದಕ್ಕೆ 200ರಂತೆ ಅಥವಾ ಎರಡು ದಿನಕ್ಕೆ ಒಂದರಂತೆ ರಿಟ್ ಪಿಟಿಷನ್ ಫೈಲ್ ಮಾಡಿದ ಹಾಗಾಯಿತು. ಸರ್ಕಾರದವರು ಅನುಸರಿಸತಕ್ಕ ಧೋರಣೆಯಿಂದ ಮತ್ತು ಅವ್ಯವಹಾರಗಳಿಂದ ಕೂಡಿದಂಥ ಕಾಯಿದೆ ಕಾನೂನುಗಳನ್ನು ಮಾಡಿರುವುದರಿಂದ ಸಾವಿರಾರು ರಿಟ್ ಪಿಟಿಷನ್ಸ್ ಹೈ ಕೋರ್ಟಿನಲ್ಲಿ ಅಡ್ಮಿಟ್ ಆಗಲು ಕಾರಣವಾಯಿತು ಎಂದು ಜನರ ಅಭಿಪ್ರಾಯ ಇದಕ್ಕೆ ತಮ್ಮ ಅಭಿಪ್ರಾಯ ಏನು ?

ಶ್ರೀ ಕೆ. ಪುಟ್ಟಸ್ವಾಮಿ.—ಅವರ ಅಭಿಪ್ರಾಯ ಸರಿಯಲ್ಲ.

Sri R. G. WALI.—Supplementary to (*a*): Since how long these 3,590 cases are pending, what are the valid reasons for the delay and whether any effort has been made to remove the difficulties, if any ?

Sri K. PUTTASWAMY.—This information I have furnished as on 30th July 1969. I cannot furnish information regarding the duration of their pendency.

Sri R. G. WALI.—Is there no inconvenience caused to the administration because of the stay orders issued in respect of these 2, 000 cases and what effort has been made to remove that inconvenience ?

Sri K. PUTTASWAMY.—Whenever stay order is issued against an administrative order, there will be certain inconvenience. We have been instructing our officers to file applications and get stay order vacated. In some cases we have been successful ; in some others we have not been successful.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಉಚ್ಚ ನ್ಯಾಯಾಲಯದ ಮುಂದೆ ಇಷ್ಟು ಕೇಸುಗಳು ಅಧಿಕಾರಿಗಳಿಂದಲೇ ಸರಕಾರಿ ಆಜ್ಞೆಗಳನ್ನು ಪ್ರಶ್ನಿಸಿ ಹಾಕಲ್ಪಟ್ಟಿರುವುದರಿಂದ ಇದನ್ನು ನೋಡಿದರೆ ಸರಕಾರಿ ಕಾನೂನುಗಳಲ್ಲಿ ಅನೇಕ ನ್ಯೂನತೆಗಳಿರುವುದರಿಂದ ಹೀಗಾಗುತ್ತಿದೆ, ನ್ಯಾಯಾಲಯದ ಮುಂದೆ ಈ ಕೇಸುಗಳು ಹೋದಾಗ ಅವು ಸರಕಾರಕ್ಕೆ ವಿರೋಧವಾಗಿ ಇತ್ಯರ್ಥವಾಗುತ್ತಿವೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾಡಿರುವ ಕಾನೂನುಗಳೆಲ್ಲಾ ಶುದ್ಧವಾಗಿಯೇ ಇವೆ. ಅನೇಕ ಸಂದರ್ಭಗಳಲ್ಲಿ, ಸೀನಿಯಾರಿಟಿ ಪ್ರಶ್ನೆ ಬಂದು ಸರಕಾರಿ ಆಜ್ಞೆಯಿಂದ ತೊಂದರೆಯಾಗಿದೆ ಎಂದು ಭಾವನೆಮಾಡಿಕೊಂಡು ಕೆಲವರು ರಿಟ್ ಹಾಕುವುದನ್ನು ಊಹಿಸುವುದಕ್ಕಾಗುವುದಿಲ್ಲ.

Sri A. R. BADRINARAYAN.—Have Government gone into the question why there were so many writ petitions filed and pending before the court ? Have they gone into the cause and found out remedies for the same ?

Sri K. PUTTASWAMY.—Government are continuously trying to find out causes. As the House is well aware, areas from 5 different States were integrated into one State ; there were varying conditions of service, scales of pay, etc. All of them had to be integrated. There would naturally be some dissatisfaction and the affected persons would go to court and the court would decide the matter in dispute.

ಶ್ರೀ ಎಂ. ನಾಗಪ್ಪ.—56ನೆಯ ಪ್ರಶ್ನೆಗೆ ಉತ್ತರವಾಗಿ 2,204 ರಿಟ್ ಅರ್ಜಿಗಳು ದಾಖಲಾಗಿವೆ ಎಂದು ಹೇಳಿರುವುದರಲ್ಲಿ ಎಷ್ಟು ಅಲೋ ಆಗಿವೆ, ಎಷ್ಟು ರಿಜೆಕ್ಟ್ ಆಗಿವೆ ? ಅಲೋ ಆಗಿರುವುದಕ್ಕೆ ಸಂಬಂಧಪಟ್ಟಂತೆ ಸರಕಾರ ಹಿಂದಿನಿಂದ ಸಂಬಳ ಕೊಡಬೇಕಾದ ಸಂದರ್ಭಗಳಿದ್ದರೆ ಎಷ್ಟು ಕೊಟ್ಟಿದ್ದೀರಿ ?

Sri K. PUTTASWAMY.—If the hon. member gives notice of a fresh question, I can furnish information. But it would be rather difficult now. If the hon. Member has got any particular case in view and if he aske for information about that, it might be easy to furnish.

ಶ್ರೀ ಕೆ. ಎನ್. ವೀರಪ್ಪಗೌಡ.—ಪ್ರೌಢಶಾಲೆ ಉಪಾಧ್ಯಾಯರನ್ನು ನೇಮಕ ಮಾಡುವ ಬಗ್ಗೆ ಒಂದೂವರೆ ವರ್ಷದಿಂದ ಸ್ಟೇ ಆರ್ಡರು ವೆಕೇಟ್‌ಮಾಡಿಸಲು ಪ್ರಯತ್ನ ತಾವು ಮಾಡಿ ಲ್ಲವೇ ?

Sri K. PUTTASWAMY —The hon. Member is asking for information about a particular question. I am not able to give that information, but I can tell the House that all efforts are being made to get the stay orders vacated in almost all the cases.

Sri H. SIDDAVEERAPPA.—Recently in July the High Court quashed the entire IFS List thereby reverting to the *status quo ante* as there is no IFS List in the State. In spite of it the Government have not agreed to follow the directive of the High Court and in utter violation of the directive of the High Court they have given extension to some people and they have done something for which they are liable to be held for contempt of court.

Sri K. PUTTASWAMY.—The hon. Member seems to be going far beyond the scope of this question. A few days ago this question was asked and the Hon. Minister for Forests gave reply. I can supplement that by saying that Government have not violated the judgment of the High Court. The aggrieved party is the Central Government. The Central Government is considering the judgment and perhaps it would be preferring an appeal. In the meanwhile it has advised us to continue persons who are affected by that judgment in service pending its decision.

ಶ್ರೀ ಎನ್. ಹುಚ್ಚಮಾಸ್ತಿಗೌಡ.—3,590 ರಿಟ್ ಅರ್ಜಿಗಳು ಇತ್ಯರ್ಥವಾಗದೆ ಉಳಿದಿರುವು ದರಲ್ಲಿ ಸೀನಿಯಾರಿಟಿ ಲಿಸ್ಟಿಗೆ ಸಂಬಂಧಪಟ್ಟಿರುವುದೆಷ್ಟು ? ಕೌಂಟರ್ ಅಫಿಡೆವಿಟ್ ಹಾಕುವುದಕ್ಕೆ ಕಾಲವಿಯಮವಿದೆಯೇ ? ಅದನ್ನು ಕಾಲಕ್ಕೆ ಸರಿಯಾಗಿ ಹಾಕದೆ ಅನೇಕ ರೀತಿಯು ತೊಂದರೆ ಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

Sri K. PUTTASWAMY.—There is no delay in filing counter-affidavits. In fact, we have increased the number of Advocates and absolutely there is no delay in filing counter-affidavits. Because of the numerous writ petitions the High Court has not been able to dispose of them.

Sri BAPU GOWDA.—Is it not a fact that the number of writ petitions in our High Court is much more than that in other States ?

Sri K. PUTTASWAMY.—I do not think that there is any other State which was affected to the extent to which Mysore State was affected. Here parts of different States came to be formed into one State. I do not think similar circumstances exist elsewhere.

ಶ್ರೀ ಎಸ್. ಎಚ್. ತಮ್ಮಯ್ಯ.—ಅನೇಕ ಜನ ವಕೀಲರನ್ನು ಇಟ್ಟು ಅವರಿಗೆ ಬೇಕಾದಷ್ಟು ಸಂಬಳ ಕೊಟ್ಟರೂ ಕೂಡ ಎಕ್ಸ್ ಪಾರ್ಟಿ ಆಗಿ ಕೇಸುಗಳು ತೀರ್ಮಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದು ತೊಂದರೆಯಾಗಿದ್ದರೆ ಅಂತಹವರಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

Sri K. PUTTASWAMY.—I do not know any such case. If the Hon. member bring to my notice any such case I will look into the matter.

ಶ್ರೀ ಎಂ. ಎಸ್. ಕೃಷ್ಣನ್.—3,500 ಕೇಸುಗಳಲ್ಲಿ ಎಷ್ಟು ಕೇಸುಗಳು ಕಾರ್ಮಿಕರ ಮತ್ತು ಮಾಲೀಕ ರಿಟ್‌ಪಿಟೀಷನ್ ಅಂತ ಹೇಳಲಿಕ್ಕೆ ಆಗುತ್ತದೆಯೇ ? ಆದಷ್ಟು ಬೇಗ ಕಾರ್ಮಿಕರ ವಿವಾದಗಳನ್ನು ತೀರ್ಮಾನ ಮಾಡಲಿಕ್ಕೆ ಹೈಕೋರ್ಟಿಗೆ ಒಂದು ಆದೇಶ ಕೊಡುತ್ತೀವೆ ಅಂತ ಹೇಳಿ ಹಿಂದೆ ಭರವಸೆ ಕೊಟ್ಟಿದ್ದೀರಿ, ಅದರ ಬಗ್ಗೆ ಹೇಳಲಿಕ್ಕೆ ಆಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಕಾರ್ಮಿಕರಿಗೆ ಸಂಬಂಧಪಟ್ಟ ವ್ಯಾಜ್ಯಗಳು 108 ಇವೆ. ಹೈಕೋರ್ಟಿಗೆ ನಾವು ಯಾವ ಆದೇಶವನ್ನೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ನಮಗೆ ಬೇಕಾದವರಿಗೆ ಕೆಲಸ ಕೊಡುವ ಪ್ರಮೋಷನ್ ಕೊಡುವ ಉದ್ದೇಶದಿಂದ ತಾವು ಕಾನೂನನ್ನು ಬೈ ಪಾಸ್ ಮಾಡಿರುವ ನಲುವಾಗಿ ಇಷ್ಟೊಂದು ರಿಟ್ ಪಿಟಿಷನ್‌ಗಳು ಬಂದಿವೆ ಅಂತ ಹೇಳಿ ತಮ್ಮ ಅಭಿಪ್ರಾಯವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ನಿಜವಲ್ಲ.

ಶ್ರೀ ಬಿ. ದೊಡ್ಡಬೊರೇ ಗೌಡ.—3,500 ರಿಟ್ ಪಿಟಿಷನ್‌ಗಳು ಇವೆ ಅಂದಮೇಲೆ ಸರ್ಕಾರ ಹಸ್ತಕ್ಷೇಪ, ಸ್ವಜನ ಪಕ್ಷಪಾತ ಮಾಡಿದ್ದರಿಂದಲೇ ಇಷ್ಟು ರಿಟ್ ಪಿಟಿಷನ್‌ಗಳಿಗೆ ಅವಕಾಶವಾಯಿತು ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರ ಆಗಲೇ ಒಂದಲ್ಲ ಎರಡು ಸಾರಿ ಹೇಳಿದ್ದೇನೆ. ಇದರಲ್ಲಿ ಹಸ್ತಕ್ಷೇಪವೂ ಇಲ್ಲ, ಸ್ವಜನ ಪಕ್ಷಪಾತವೂ ಇಲ್ಲ, ನಿಷ್ಪಕ್ಷಪಾತವಾಗಿ ಮಾಡಿದಂತಹ ಆರ್ಡರ್‌ಗಳ ಮೇಲೂ ಕೂಡ ಹೈಕೋರ್ಟಿಗೆ ಹೋಗಿ ಅದು ಸರಿಯಲ್ಲ ಎಂದು ಹೇಳುವುದಕ್ಕೆ ಅವಕಾಶ ಇವೆ, ಅದಕ್ಕೆ ಹೋಗುತ್ತಾ ಇರುತ್ತಾರೆ.

Sri B. B. SAYANAK.—May I know when Mysore State was renamed as New Mysore State ?

Sri K. PUTTASWAMY.—Mysore State has not been renamed as New Mysore State. The hon. Member used that term ; instead of refusing to answer, we have given the answer.

ಶ್ರೀ ಮಹದೇವ್ ಜಿ. ಬಣಕಾರ್.—ಈ ರಿಟ್‌ಪಿಟಿಷನ್‌ಗಳನ್ನು ತೀರ್ಮಾನ ಮಾಡಿದಮೇಲೆ ಅವುಗಳನ್ನು ಕಾರ್ಯಗತಗೊಳಿಸುವುದಕ್ಕೆ ಸರ್ಕಾರದಲ್ಲಿ ಒಂದು ನಿಯಮ ಇದೆಯೇ ? ಒಂದು ಅವಧಿ ಗೊತ್ತುಮಾಡಿದ್ದೀರಾ ? ಹಾಗಿದ್ದರೆ ಅದರ ಪ್ರಕಾರ ನಡೆದುಕೊಳ್ಳದೇ ಇರುವುದಕ್ಕೆ ಕಾರಣ ವೇನು ? ಆ ರೀತಿಯ ಕೇಸುಗಳು ಎಷ್ಟು ಇವೆ ? ಅದರಲ್ಲಿ ವಿಲೀನಪ್ರದೇಶದವರಿಗೆ ಸಂಬಂಧ ಪಟ್ಟವು ಎಷ್ಟು ?

ಶ್ರೀ ಕೆ. ಪುಟ್ಟಸ್ವಾಮಿ.—4–5 ಪ್ರಶ್ನೆಗಳನ್ನು ಕೇಳಿದ್ದಾರೆ. ವಿಲೀನಪ್ರದೇಶದವು ಎಷ್ಟು ಅಂತ ಹೇಳುವುದಕ್ಕಾಗುವುದಿಲ್ಲ, ಪ್ರಾದೇಶಿಕ ಆಧಾರದಮೇಲೆ ಅಂಕಿಅಂಶಗಳನ್ನು ಇಟ್ಟುಕೊಂಡಿಲ್ಲ. ಹೈಕೋರ್ಟಿನಲ್ಲಿ ಆದಂತಹ ಜಡ್ಜ್‌ಮೆಂಟುಗಳನ್ನು ಆದಷ್ಟು ಕ್ಷಿಪ್ರವಾಗಿ ಜಾರಿಗೆ ತರುತ್ತೇವೆ, ಹೈಕೋರ್ಟಿನ ತೀರ್ಮಾನವಾದ ಮೇಲೂ ಕೂಡ ಸುಪ್ರೀಂ ಕೋರ್ಟಿಗೆ ಅಪೀಲು ಹೋಗತಕ್ಕ ಸಂದರ್ಭ ಇರುತ್ತದೆ. ಎಷ್ಟರಲ್ಲಿ ನಿಧಾನವಾಗಿ, ಯಾವ ಕಾರಣದಿಂದ ಎಂಬ ವಿಚಾರ ಬೇಕಾದರೆ ನಿರ್ದಿಷ್ಟವಾದ ಒಂದು ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

Service Connection to the Mana Akheli Hospital

290. Sri V. N. PATIL (Humnabad).—

Will the Minister for Public Works be pleased to state :—

(*a*) whether the Government is aware that service connection has not been given to the Government Hospital at Mana Akheli in spite of the fact that the wiring had been done 3 years ago ;